ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ತಟ್ಟೇಕ್ಕಾಡ್ ಎಂಬ ಪಕ್ಷಿಲೋಕ

ಹಕ್ಕಿಲೋಕದಲ್ಲಿ ಕಾಜಾಣದಷ್ಟು ಬುದ್ಧಿವಂತ ಹಾಗೂ ಧೈರ್ಯಶಾಲಿ ಹಕ್ಕಿ ಮತ್ತೊಂದಿಲ್ಲ. ಡ್ರೋಂಗೋ ಎಂಬ ಪ್ರಜಾತಿಯ ಈ ಹಕ್ಕಿ ಸಂತಾನಗಳೇ ಭಾರಿ ಯುದ್ಧಕೋರರು. ದೊಡ್ಡ ಪಕ್ಷಿಗಳಿಗೆ ಬೆದರಿಕೆ ಹಾಕಿ ಓಡಿಸುವಷ್ಟು ಛಾತಿ ಇವಕ್ಕುಂಟು. ಕಾಡಿನಲ್ಲಿ ಇತರೆ ಖಗಗಳ ರೇಗಿಸುವ, ಚುಡಾಯಿಸಿ ಗೋಳಾಡಿಸುವ, ಕಾಜಾಣ ಅನೇಕ ವಿಷಯಗಳಲ್ಲಿ ವಿಶೇಷ.

ಕೇರಳದಲ್ಲಿದ್ದ ಎಲ್ದೋಸ್ ಎಂಬ ಮನುಷ್ಯನ ನಾವು ಕಾಣಬೇಕಿತ್ತು. ಈತ ಪಕ್ಷಿಗಳ ಪಟ ತೆಗೆಸುವುದರಲ್ಲಿ ನಿಸ್ಸೀಮ ಎಂದು ಹೆಸರು ಮಾಡಿದ್ದಾತ. ಖಗಗಳ ಜೀವನ ಶೈಲಿಯ ಬಗ್ಗೆ ಅವನಿಗಿದ್ದ ಅನುಭವ, ಜ್ಞಾನ ಅಗಾಧ. ನಿಸರ್ಗದ ಹಕ್ಕಿಗಳನ್ನು ತಾನಿರುವಲ್ಲಿಗೇ ಕರೆಸುವಷ್ಟು ಪಳಗಿಸಿದ್ದ. ಫೋನಿನಲ್ಲಿ ಮಾತಾಡಿ ಎರಡು ದಿನ ಬಂದು ಉಳಿಯಬಹುದೇ? ಎಂದು ವಿಚಾರಿಸಿದೆ. ಅವನ ಇಂಗ್ಲಿಷ್ ಭಾಷೆಯ ಗುಣಮಟ್ಟ ನನ್ನಷ್ಟೇ ಗಬ್ಬೆದ್ದು ಹೋಗಿತ್ತು. ಹರಕುಮುರುಕು ಆಂಗ್ಲ ನುಡಿಗೆ ಮಲಯಾಳಂ ಜೋಡಿಸಿ ಗೊಣಗೊಣ ಎಂದು ಮಾತಾಡತೊಡಗಿದ. ಅವನಿಗಿಂತ ನಾನೇನು ಕಮ್ಮಿ ಎಂದು ಇಂಗ್ಲಿಷ್ ಪದ ಸಮಸ್ಯೆಯಾದ ಕಡೆ ಕನ್ನಡ ಮಾತು ಪೋಣಿಸಿಟ್ಟು ಬಾರಿಸತೊಡಗಿದೆ. ಆತ ನನ್ನ ಯಾವ ಮಾತಿಗೆ ಹ್ಞೂ ಎಂದು ಒಪ್ಪಿಕೊಂಡನೋ ಗೊತ್ತಿಲ್ಲ!. ಒಂದು ದಿನಾಂಕ ಕೊಟ್ಟು ಅವನ ಮನೆಯ ಲೊಕೇಶನ್ ಕಳಿಸಿದ.

ಗೂಗಲ್ ಆಂಟಿಯ ನಂಬಿಕೊಂಡು ಕಾರಿನಲ್ಲಿ ಮನೆ ಹುಡುಕುತ್ತಾ ಹೋದೆವು. ಅವನ ಫಾರ್ಮ್ ಹೌಸ್ ಇದ್ದ ಜಾಗದ ಸುತ್ತಮುತ್ತವೇ ಗೂಗಲ್ ಆಂಟಿ ಹಲವಾರು ಸಲ ಸುತ್ತಾಡಿಸಿದಳು. ಅವಳ ನಂಬಿ ಹೋದ ನಾವು ಮಂಗ ಆಗಿದ್ದೆವು. ಪುನಃ ಅಲ್ಲಲ್ಲೇ ಚಕ್ರ ಹೊಡೆಸಿ ಹಳೆಸೇಡು ತೀರಿಸಿಕೊಳ್ಳುತ್ತಿದ್ದಳು. ಇವಳ ಮೇಲಿದ್ದ ನಂಬಿಕೆಯೇ ಅಂದು ಹೊರಟು ಹೋಯಿತು! ಯಾರಿಗಾದರೂ ಹಿಡಿದು ಕೇಳೋಣವೆಂದರೆ ಅಲ್ಲಿ ಜನರ ಓಡಾಟವೂ ಇರಲಿಲ್ಲ. ಸಂಜೆಗತ್ತಲು ಆವರಿಸುತ್ತಿತ್ತು. ಸುಮ್ಮನೆ ಕಾರಿಳಿದು ಚಿಂತಾಕ್ರಾಂತರಾಗಿ ನಿಂತೆವು. ಪ್ರಯಾಣದ ಆಯಾಸ ಮುಗಿಸಲು ಮೊದಲು ನಮ್ಮ ರೂಮು ಸೇರಬೇಕಿತ್ತು.

ಅಷ್ಟರಲ್ಲಿ ಲಡಾಸು ವಾಹನದಲ್ಲಿ ಒಬ್ಬ ರೈತ ಹುಲ್ಲಿನ ಹೊರೆ ಕಟ್ಟಿಕೊಂಡು ಹೋಗುತ್ತಿದ್ದ. ಅಣ್ಣ ಎಂದು ಕೂಗಿ ಕರೆದು ಹತ್ತಿರಕ್ಕೆ ಓಡಿದೆ. ಅವನು ಸಿಡುಕಿನಿಂದ ಪತರುಗುಟ್ಟುತ್ತಿದ್ದ ತನ್ನ ವಾಹನ ನಿಲ್ಲಿಸಿದ. ಎಲ್ದೋಸ್ ಮನೆ ಎಲ್ಲಿದೆ? ಎಂದು ಕೇಳಿದೆ. ಆತ ಮಾತಾಡದೆ ನನ್ನ ಹಿಂದೆ ಬಾ ಎಂದು ಮುಂದೆ ಹೊರಟ. ಕಲ್ಲು ರಸ್ತೆಯಲ್ಲಿ ಹಿಂಬಾಲಿಸಿ ಹೋದಾಗ ಮುಂದೊಂದು ಭವ್ಯವಾದ ಬಂಗಲೆ ಮನೆ ಕಾಣಿಸಿತು. ಅದರ ಕೆಳಗೆ ನವೀನ ಶೈಲಿಯ ಸುಂದರ ನಾಲ್ಕು ಕಾಟೇಜುಗಳಿದ್ದವು.